| ಪರ್ಯಾಯ ಶೈಕ್ಷಣಿಕ ಯೋಜನೆ 2021–22<br>ತರಗತಿ:4 ಅಕ್ಟೋಬರ್ ಮಾಹೆ ಪ್ರಥಮ ಭಾಷೆ ಕನ್ನಡ<br>ಆರಿಸಿದ ಭಾಗ : ದೊಡ್ಡವರು ಯಾರು?<br>ಪ್ರಮುಖ ಕಲಿಕಾ ಸಾಮರ್ಥ್ಯ : ವಿವಿಧ ವಿನೋದ ಚಿತ್ರ ಸರಣಿಗಳನ್ನು ಓದಿ ಅರ್ಥೈಸಿಕೊಳ್ಳುವರು. | | | |
|---|---|---|---|
| | **ಪ್ರಮುಖ ಕಲಿಕಾಂಶ / ಸಾಮರ್ಥ್ಯ** | **ಕಲಿಕಾ ಚಟುವಟಿಕೆ** | **ಮೌಲ್ಯಮಾಪನ** |
| ಅಕ್ಟೋಬರ್ 1 ನೇ ವಾರ | • ವಿನೋದ ಚಿತ್ರಸರಣಿಗಳನ್ನು ವೀಕ್ಷಿಸುವರು.<br>• ಚಿತ್ರಸಹಿತ ಕಥೆಯನ್ನು ಕೇಳಿ ತಿಳಿಯುವರು.<br>• ಚಿತ್ರ ವೀಕ್ಷಿಸಿ ಸಂದರ್ಭ ವಿವರಿಸುವರು.<br>• ಭಿತ್ತಿ ಪತ್ರಗಳ ಬಗ್ಗೆ ತಿಳಿಯುವರು.<br>• ಭಿತ್ತಿ ಪತ್ರಗಳ ಬಗ್ಗೆ ಚರ್ಚಿಸುವರು.<br>• ಮಾದರಿ ವಾಚನ ಆಲಿಸುವರು<br>• ಮಕ್ಕಳು ಸೂಕ್ತ ಸ್ವರಭಾರದೊಂದಿಗೆ ಓದುವರು.<br>• ಗದ್ಯವನ್ನು ಅರ್ಥೈಸಿಕೊಂಡು | ಶಿಕ್ಷಕರು ಯು–ಟ್ಯೂಬ್ ಚಾನಲ್‌ನಲ್ಲಿರುವ ಚಿತ್ರಸರಣಿ ವಿಡಿಯೋಗಳನ್ನು ಮಕ್ಕಳಿಗೆ ತೋರಿಸುವರು. ದಿನಪತ್ರಿಕೆಗಳಲ್ಲಿ ಬರುವ ಚಿತ್ರಸರಣಿಗಳನ್ನು ಸಂಗ್ರಹಿಸಿ ಮಕ್ಕಳಿಗೆ ತೋರಿಸಿ ಅಲ್ಲಿರುವ ಕಥೆಯನ್ನು ಓದಿ ಹೇಳುವರು.<br><br>ನಲಿ–ಕಲಿ 1–2ನೇ ತರಗತಿಯ ಸನ್ನಿವೇಶ ಕಾರ್ಡ್ ಬಳಸಿ ತಮ್ಮದೇ ಮಾತುಗಳಲ್ಲಿ ಸಂದರ್ಭ ವಿವರಿಸಲು ಹೇಳುವರು.<br><br>ವಸ್ತುಗಳ ಮಾರಾಟ, ಪ್ರಚಾರ ಭಿತ್ತಿ ಪತ್ರಗಳು ಮತ್ತು ಕೋವಿಡ್–19 ಮುಂಜಾಗ್ರತೆ, ಸುರಕ್ಷತೆ, ಲಸಿಕೆ ಇತ್ಯಾದಿಗಳ ಬಗೆಗಿನ ಪ್ರಚಾರಪತ್ರಗಳನ್ನು ವಿದ್ಯಾರ್ಥಿಗಳಿಗೆ ತೋರಿಸಿ ಅಂತಹ ಹಲವಾರು ಭಿತ್ತಿ ಪತ್ರಗಳನ್ನು ಸಂಗ್ರಹಿಸಲು ತಿಳಿಸುವರು.<br><br>ಶಿಕ್ಷಕರು ಗದ್ಯಾಂಶವನ್ನು ಸೂಕ್ತ ಸ್ವರಭಾರದೊಂದಿಗೆ ( ಅಭಿನಯದೊಂದಿಗೆ ) ವಾಚಿಸಿದ ನಂತರ ಮಕ್ಕಳಿಗೆ ಸಂಭಾಷಣೆಯನ್ನು ಧ್ವನಿ ಏರಿಳಿತಗಳೊಂದಿಗೆ ಓದುವುದನ್ನು ಅಭ್ಯಾಸ ಮಾಡಿಸುವರು.<br><br>ಶಿಕ್ಷಕರು ಮಕ್ಕಳ ವಾಚನವನ್ನು ಗಮನಿಸುವರು ಮತ್ತು ಸಂದರ್ಭೋಚಿತವಾದ ಧ್ವನಿಯೊಂದಿಗೆ ಓದಲು ಉತ್ತೇಜನ ನೀಡುವರು. | • ವಿಡಿಯೋ / ಕಥಾಸರಣಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br><br>ವಿಷಯಕ್ಕೆ ಸಂಬಂಧಿಸಿದ ಸರಳ ಪ್ರಶ್ನೆ ಬಳಸುವುದು.<br><br>• ಸಂಭಾಷಣೆಯನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಪ್ರಶ್ನಿಸುವುದು.<br><br>• ಅಭ್ಯಾಸದ ಪ್ರಶ್ನೆಗಳನ್ನು |

| | | | |
|---|---|---|---|
| | ಪ್ರಶ್ನೆಗೆ ಉತ್ತರಿಸುವರು<br><br>• ವಿವಿಧ ಪ್ರಾಣಿಗಳ ಕೂಗನ್ನು ಅನುಸರಿಸುವರು<br><br>• ಹೊಸ ಪದವನ್ನು ರಚಿಸುವರು.<br><br>• ದಿನಪತ್ರಿಕೆಯಲ್ಲಿನ ವಿನೋದ ಚಿತ್ರಸರಣಿ ಸಂಗ್ರಹಿಸಿ ಓದುವರು ಮತ್ತು ಭಿತ್ತಿ ಪತ್ರ ಸಂಗ್ರಹಿಸುವರು. | ಗದ್ಯದ ಸರಳ ವಿವರಣೆ ನೀಡುತ್ತಾ ಹೊಸಪದಗಳ ಅರ್ಥ ತಿಳಿಸುತ್ತಾ ಸಂದರ್ಭೋಚಿತವಾಗಿ ಪ್ರಶ್ನಿಸುತ್ತಾ ಮಕ್ಕಳಿಗೆ ಉತ್ತರಿಸಲು ಪ್ರೇರೇಪಿಸುವರು. ಹೊಸ ಪದಗಳ ಅರ್ಥ ತಿಳಿಸುವುದು. ಹೊಸ ಪದಗಳಿಗೆ ಸ್ವಂತ ವಾಕ್ಯ ರಚಿಸಲು ಉತ್ತೇಜನ ನೀಡುವುದು.<br><br>ಮಕ್ಕಳಿಗೆ ಚಿರಪರಿಚಿತವಾಗಿರುವ ಪ್ರಾಣಿ ಪಕ್ಷಿಗಳ ಹೆಸರನ್ನು ಹೇಳಿ ಅವುಗಳ ಕೂಗನ್ನು ಅನುಕರಿಸಲು ಅಭಿನಯಿಸಲು ತಿಳಿಸುವುದು.<br>ಮಕ್ಕಳು ಹೇಳಿದ ಪ್ರಾಣಿ ಪಕ್ಷಿಗಳು ಹೇಗೆ ಕೂಗುತ್ತವೆಂಬುದನ್ನು ಅವರಿಂದಲೇ ಅನುಸರಿಸಿ/ಅಭಿನಯಿಸಲು ತಿಳಿಸುವುದು.<br><br>ಸರಳ ಭಾಷಾ ಚಟುವಟಿಕೆ ಮಾಡಿಸುವುದು.<br><br>ಶಿಕ್ಷಕರು ಯೋಜನೆಯ ರೂಪದಲ್ಲಿ ದಿನಪತ್ರಿಕೆಯಲ್ಲಿ ಪಾಕ್ಷಿಕಗಳಲ್ಲಿ ಬರುವ ವಿನೋದ ಚಿತ್ರಸರಣಿ ಸಂಗ್ರಹಿಸಿ ಆಲ್ಬಮ್ ತಯಾರಿಸುವಂತೆ ಪ್ರೇರೇಪಿಸುವರು. ಹಾಗೂ ಭಿತ್ತಿಪತ್ರಗಳನ್ನು ಸಂಗ್ರಹಿಸಲು ತಿಳಿಸುವುದು | ಬಳಸುವರು.<br><br>ಮದುವೆ – ಪದ ಬಳಸಿ ಸ್ವಂತವಾಕ್ಯ ರಚಿಸಿ<br><br>• ಪ್ರಾಣಿ ಪಕ್ಷಿಗಳ ಕೂಗನ್ನು ಅನುಸರಿಸಿ ಹೊಂದಿಸಿ ಬರೆಯಿರಿ.<br>ಕೋಳಿ – ಬೌ ಬೌ<br>ಕಾಗೆ – ಅಂಬಾ .<br>ಕರು – ಕೊಕ್ಕೊಕ್ಕೊ. . .<br>ನಾಯಿ – ಕಾ. ಕಾ. ಕಾ.<br>• ಸುಮೇರು ಭಾಗ–2 ಪುಟಸಂಖ್ಯೆ 30,31,32 ಬಳಸುವುದು. |

**ಆರಿಸಿದ ಭಾಗ : ಬೀಸೋ ಕಲ್ಲಿನ ಪದ (ಪದ್ಯ)**

ತರಗತಿ = 4

ಸಾಮರ್ಥ್ಯ: ಆಡುಭಾಷೆ ಹಾಗೂ ಬರಹದ ಭಾಷೆಗಳ ನಡುವಿನ ವ್ಯತ್ಯಾಸ ಗುರ್ತಿಸುವರು.

| ತಿಂಗಳು / ವಾರ | ಪ್ರಮುಖ ಕಲಿಕಾಂಶ / ಸಾಮರ್ಥ್ಯ | ಕಲಿಕಾ ಚಟುವಟಿಕೆ | ಮೌಲ್ಯಮಾಪನ |
|---|---|---|---|
| ಅಕ್ಟೋಬರ್ 2 ನೇ ವಾರ | • ಜೋಗುಳಪದ / ಗೀಗೀಪದ/ ಲಾಲಿಹಾಡು / ಜನಪದ ಹಾಡನ್ನು ಆಲಿಸಿ ಹಾಡುವರು.<br><br>• ಮಕ್ಕಳು ತಾವು ಕಲಿತ ಜೋಗುಳಪದ ಅಥವಾ ಯಾವುದಾದರೂ ಜನಪದಗೀತೆ ಹಾಡುವರು.<br><br>• ಪದ್ಯ ಹಾಡುವುದನ್ನು ಆಲಿಸುವರು.<br><br>• ಪದ್ಯದ ಸರಳ ಸಾರಾಂಶ ಮತ್ತು ಹೊಸಪದಗಳ ಅರ್ಥವನ್ನು ತಿಳಿಯುವರು. | ಶಿಕ್ಷಕರು ಧ್ವನಿಸುರುಳಿ ಅಥವಾ ಮೊಬೈಲ್‌ನ ಸಹಾಯದಿಂದ ಜೋಗುಳಪದ ಗೀಗೀಪದಗಳನ್ನು ಮಕ್ಕಳಿಗೆ ಕಳಿಸಿ / ತೋರಿಸಿ ಅದರೊಟ್ಟಿಗೆ ಹಾಡಲು ಅಭಿಪ್ರೇರಿಸುವರು.<br><br>ಶಿಕ್ಷಕರು ಮಕ್ಕಳಿಂದ ಜೋಗುಳ / ಲಾಲಿಹಾಡು ಗೀತೆಯನ್ನು ಹಾಡಿಸಿ ಅದರಲ್ಲಿ ಬರುವ ಕೆಲವು ಪದಗಳನ್ನು ಪಟ್ಟಿ ಮಾಡಿಕೊಂಡು ಆ ಪದಗಳ ಅರ್ಥ ತಿಳಿಸುತ್ತಾ ಅದರ ಬರೆಹದ ( ಗ್ರಾಂಥಿಕರೂಪ ) ರೂಪವನ್ನು ತಿಳಿಸುವರು.<br>ಉದಾ : ಆಡಿಬಾ ಎನಕಂದ ಅಂಗಾಲ ತೊಳೆದೇನ<br>ತೆಂಗಿನಕಾಯಿ ತಿಳಿನೀರ ತಕ್ಕೊಂಡು<br>ಬಂಗಾರ ಮೋರೆ ತೊಳೆದೇನು<br>ತೊಳೆದೇನು : ತೊಳೆಯುತ್ತೇನೆ<br>ತಕ್ಕೊಂಡು : ತೆಗೆದುಕೊಂಡು<br><br>ಶಿಕ್ಷಕರು ಯು–ಟ್ಯೂಬ್ ಲಿಂಕ್ ಬಳಸಿ ಬೀಸೋ ಕಲ್ಲಿನ ಪದ ಹಾಡುವುದನ್ನು ಕೇಳಿಸಬಹುದು.<br>(YOUTUBE LINK : https://youtube/YoutGneGoAQ)<br>(ಶಿಕ್ಷಕರು ತಾವೇ ಮಧುರವಾಗಿ ಹಾಡಿ ಮಕ್ಕಳಿಗೆ ಹಾಡಲು ಪ್ರೇರೇಪಿಸಬಹುದು)<br><br>ಶಿಕ್ಷಕರು ಪದ್ಯವನ್ನು ಅರ್ಥೈಸುತ್ತಾ ಬಳಕೆಯಾಗಿರುವ ಹೊಸಪದಗಳ ಅರ್ಥ ತಿಳಿಸುವರು. (ಅವಶ್ಯವಿದ್ದಲ್ಲಿ ಚಿತ್ರಸಹಿತ ಅರ್ಥ ತಿಳಿಸಲು ಮೊಬೈಲ್ | • ಮನೆಯ ಹಿರಿಯರಿಂದ ಜೋಗುಳ ಪದ ಕೇಳಿ ಕಲಿತು ಹಾಡಿರಿ.<br><br>• ಪಠ್ಯಪುಸ್ತಕದ ಭಾಷಾ ಚಟುವಟಿಕೆಯ ಆಡುಮಾತು ಮತ್ತು ಬರೆಹದ ಮಾತಿನ ವ್ಯತ್ಯಾಸಪಟ್ಟಿ ಬಳಸುವುದು.<br><br>ಪದ್ಯವನ್ನು ರಾಗವಾಗಿ ಹಾಡಲು ತಿಳಿಸುವುದು.<br><br>ಮೇನೆ – ಪದದ ಅರ್ಥವೇನು? |

| | | | |
|---|---|---|---|
| | • ಪದಗಳ ಭಿನ್ನ ಅರ್ಥ ತಿಳಿಯುವರು<br><br>• ಆಡುಭಾಷೆ ಬರಹದ ಭಾಷೆಯ ಬಗ್ಗೆ ತಿಳಿಯುವರು.<br><br>• ಆಡುಭಾಷೆಯ ಕಥೆಯನ್ನು ಬರಹದ ಭಾಷೆಯಲ್ಲಿ ಬರೆಯುವರು. | ಬಳಸಬಹುದು)<br>ಉದಾ: ಸೊಸಿ = ಸೊಸೆ, ಮಗನ ಹೆಂಡತಿ ಇತ್ಯಾದಿ<br><br>ಪದ್ಯದಲ್ಲಿನ ಕೆಲವು ಪದಗಳು ಸಂದರ್ಭಾನುಸಾರ ಪಡೆಯುವ ಭಿನ್ನ ಅರ್ಥ ತಿಳಿಸುತ್ತಾ, ಭಿನ್ನ ಅರ್ಥದಲ್ಲಿ ವಾಕ್ಯ ರಚಿಸಲು ಮಕ್ಕಳಿಗೆ ಪ್ರೇರೇಪಣೆ ನೀಡುವುದು.<br>ಉದಾ: ತಂದೆ 1) ನಾನು ಸಂತೆಯಿಂದ ತರಕಾರಿ ತಂದೆ.<br>2) ನನ್ನ ತಂದೆ ಬಹಳ ಒಳ್ಳೆಯವರು.<br><br>ಶಿಕ್ಷಕರು ಪದ್ಯದಲ್ಲಿ ಬರುವ ಪದಗಳನ್ನು ಪಟ್ಟಿ ಮಾಡಿ ಅವುಗಳ ಬರಹದ ರೂಪವನ್ನು ತಿಳಿಸಿ ಅದರಂತೆ ಮಕ್ಕಳು ತಮ್ಮ ಮನೆಯಲ್ಲಿ ಬಳಸುವ ಹಲವಾರು ಪದಗಳಿಗೆ ಬರೆಹದ ರೂಪ ಬರೆಯಲು / ಹೇಳಲು ಉತ್ತೇಜಿಸುವರು.<br>ಉದಾ: ಬೆಳಗೇನು – ಬೆಳಗುವೆನು<br>ಅಂದುಳ್ಳ – ಅಂದವುಳ್ಳ<br>ನೆನೆದೇನ – ನೆನೆಯುವೆನು<br><br>ಶಿಕ್ಷಕರು ಆಡುಭಾಷೆಯ ರೂಪದಲ್ಲಿ ಚಿಕ್ಕ ಕಥೆಯನ್ನು ಮಕ್ಕಳಿಗೆ ಕೊಟ್ಟು ಅದನ್ನು ಬರೆಹದ ರೂಪದಲ್ಲಿ ಬರೆಯಲು ತಿಳಿಸುವರು. | “ಕುಕ್ಕೆ” ಯ ಚಿತ್ರ ಬಿಡಿಸಿ.<br><br>ಭಿನ್ನಾರ್ಥದಲ್ಲಿ ಸ್ವಂತ ವಾಕ್ಯ ರಚಿಸಲು ಅಭ್ಯಾಸದ ಪ್ರಶ್ನೆ ಬಳಸುವುದು.<br><br>• ಸುಮೇರು – 2 ರ ಪುಟ 28,29ನ್ನು ಬಳಸುವುದು.<br><br>• ಆಡುಭಾಷೆ ಮತ್ತು ಬರೆಹದ ಭಾಷೆಯ ವ್ಯತ್ಯಾಸ ತಿಳಿದು ಬಳಸುವರು. |

## ಕಾರ್ಯ ಹಾಳೆ – 1

## ದೊಡ್ಡವರು ಯಾರು?

**I. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸಿ:–**

1. ತಂದೆ ಇಲಿಗಳು ಯೋಚಿಸಿದವು ತಾಯಿ

______________________________________________

2. ಬೆಳಗುವ ಬಹಳ ಸೂರ್ಯ ದೊಡ್ಡವನು ಜಗತ್ತನ್ನೇ

______________________________________________

**II. ಕೊಟ್ಟಿರುವ ಪದಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ:–**

1. ಹೆಣ್ಣು – ಎಣ್ಣು ____________
2. ತಾಇ – ತಾಯಿ ____________
3. ವರ – ಒರ ____________
4. ಇಲಿ – ಯಿಲಿ ____________
5. ಹನ್ನು – ಹಣ್ಣು ____________

**III. ಕೊಟ್ಟಿರುವ ಮಾತನ್ನು ಯಾರು ಯಾರಿಗೆ ಹೇಳಿದರು?**

1. “ಜಗತ್ತನ್ನೇ ಬೆಳಗುವ ಸೂರ್ಯ ಬಹಳ ದೊಡ್ಡವನು.”

ಯಾರು?______________________________________

ಯಾರಿಗೆ?______________________________________

2. “ಇಲ್ಲಾ! ಇಲ್ಲಾ! ನನಗಿಂತಲೂ ದೊಡ್ಡವನು ಬೆಟ್ಟದ ರಾಜನಿದ್ದಾನೆ.”

ಯಾರು? ______________________________________

ಯಾರಿಗೆ? ______________________________________

**IV. ಕೊಟ್ಟಿರುವ ಅಕ್ಷರ ಬಳಸಿ ಪ್ರಾಣಿಗಳ ಹೆಸರನ್ನು ಪಟ್ಟಿ ಮಾಡಿ.**

| | | | | |
|---|---|---|---|---|
| ಬ | ಹ | ಸು | ಸ | ಮ |
| ಡ | ಇ | ರ | ಕ | ತ್ತೆ |
| ಹು | ಲಿ | ಬ | ರ | ಎ |
| ತೋ | ಕ | ನ | ಖ | ಮ್ಮೆ |
| ಬ | ಳ | ನ | ರ | ಡ |

ಮಾದರಿ : ಹಸು ____________ ____________

____________ ____________

____________ ____________

## ಕಾರ್ಯ ಹಾಳೆ – 1

## ಬೀಸೋ ಕಲ್ಲಿನ ಪದ (ಪದ್ಯ)

---

**I. ಕೊಟ್ಟಿರುವ ಪದಗಳನ್ನು ಬರೆಹದ ಭಾಷೆಯಲ್ಲಿ ಬರೆಯಿರಿ:**

1. ಹೆಚ್ಯಾವು : ____________
2. ವದಗ್ಯಾವು : ____________
3. ಸಿಟ್ಯಾಕೆ : ____________
4. ಚಂದುಳ್ಳ : ____________

**II. ಕೊಟ್ಟಿರುವ ಗಾದೆ ಮಾತನ್ನು ಬರಹದ ಭಾಷೆಗೆ ಬದಲಾಯಿಸಿ:–**

1. ಕುಣಿಲಾರ್ದವಳು ನೆಲ ಡೊಂಕು ಅಂದ್ಲಂತೆ.

____________________________________________

2. ಅತ್ತೆ ಮ್ಯಾಗಳ ಸಿಟ್ಟು ಕೊತ್ತಿ ಮ್ಯಾಲೆ.

____________________________________________

3. ಕೂಸು ಹುಟ್ಟಾಕೆ ಮೊದ್ಲೆ ಕುಲಾವಿ ಹೊಲಿಸಿದ್ರಂತೆ.

____________________________________________

**III. ಕೊಟ್ಟಿರುವ ಪದಗಳಿಗೆ ಭಿನ್ನ ಅರ್ಥದಲ್ಲಿ ಸ್ವಂತ ವಾಕ್ಯ ಬರೆಯಿರಿ**

ಮಾದರಿ: <u>ಅತ್ತೆ</u>:– 1. ನನ್ನ <u>ಅತ್ತೆ</u> ನನಗೆ ಹೊಸ ಬಟ್ಟೆ ತಂದರು.

2. ಅಮ್ಮ ಗದರಿಸಿದಾಗ ನಾನು <u>ಅತ್ತೆನು</u>.

1. ಬೆಳೆ :____________________________________________
2. ಬೆಳೆ :____________________________________________
3. ಆಡು:____________________________________________
4. ಆಡು:____________________________________________